ಶ್ರೀ ಹೆಚ್.ವೈ. ಮೇಟಿ:- ಮಾನ್ಯ ಅಧ್ಯಕ್ಷರೆ ನಮ್ಮ ನಾಯಕರುಗಳು ಹೇಳಿದ ಹಾಗೆ ಕೃಷ್ಣಾನದಿ ಒಂದೇ ಬತ್ತಿಲ್ಲ, ಮಲಪ್ರಭವು ಕೂಡ ಬತ್ತಿದೆ. ಹೀಗಾಗಿ ಬಾದಾಮಿ ಮತ್ತು ಹುನಗುಂದ ತಾಲೂಕಿನ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದೆ. ನಿಂತ ನೀರನ್ನು ಕುಡಿಯುವುದರಿಂದ ಕಾಲರ ರೋಗವು ಬಹಳ ಕಡೆಗಳಲ್ಲಿ ಹಬ್ಬಿದೆ. ಗುಳೇದ ಗುಡ್ಡದಲ್ಲಿ ನಲವತ್ತಾಲ್ಕು ಕೇಸ್‌ಗಳು ದಾಖಲೆಯಾಗಿವೆ. ಮತ್ತು ಸುಳಿಬಾವಿಯಲ್ಲಿ 3 ಜನರು ಕಾಲರದಿಂದ ಸತ್ತಿದ್ದಾರೆ. ಅದು ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ನವಿಲು ತೀರ್ಥದಿಂದ ನಮಗೆ ನೀರು ಒದಗಿಸಿದರೆ ಕುಡಿಯುವ ನೀರು ನಮಗೆ ಅನುಕೂಲವಾಗುತ್ತದೆ. ಗುಳೇದಗುಡ್ಡದಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯು ಬಹಳ ಹದಗೆಟ್ಟಿದೆಯಾದ ಕಾರಣ ನವಿಲು ತೀರ್ಥದಿಂದ ಕುಡಿಯುವ ನೀರನ್ನು ಬಿಡುಗಡೆ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನನ್ನ ಕ್ಷೇತ್ರದ ಬಹಳ ಪಿಹೆಚ್ ಗಳಲ್ಲಿ ಡಾಕ್ಟರ್‌ಗಳು ಇಲ್ಲ. ಅಲ್ಲಿಗೆ ಕೂಡಲೇ ಡಾಕ್ಟರ್‌ಗಳನ್ನು ನೇಮಿಸಿ ಕಾಲರ ರೋಗವನ್ನು ನಿಯಂತ್ರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು, ಸಿಂಧ್ಯಾರವರು, ಮೇಟಿಯವರು ಎತ್ತಿದಂತಹ ಪ್ರಶ್ನೆಯು ಬಿಜಾಪುರಕ್ಕೆ ವಿಶೇಷತಃ ಕುಡಿಯುವ ನೀರಿನ ಸರಬರಾಜಿನ ಕುರಿತದ್ದಾಗಿದೆ. ನಾನು ಸ್ವತಃ ಎರಡು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಯವರಾದ ಶರದ್ ಪವಾರ್‌ರವರ ಜೊತೆಗೆ ಮಾತನಾಡಿದ್ದೇನೆ. ಕಡೆ ಪಕ್ಷ 5 ಟಿಎಂಸಿ ನೀರನ್ನು ಕೊಯ್ನಾದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ನಮಗೆ ಮತ್ತು ಅವರಿಗೆ ಇರುವ ಒಂದು ಸಂಶಯ ಅಂದರೆ ಮತ್ತು ಅವರಿಗೂ ಕೂಡ ಆ ಡ್ಯಾಮ್‌ನಲ್ಲಿ ರಿಕ್ವಯರ್‌ಮೆಂಟ್ ಸ್ಟೋರೇಜ್ ಇರಬೇಕಾದದ್ದು 40 ಟಿಎಂ.ಸಿ. ನೀರು. ಇದು ಇರಬೇಕಾಗುತ್ತದೆ. ಅದಕ್ಕೂ ಕಡಿಮೆ ಸ್ಟೋರೇಜ್ ಇದ್ದು ನಮಗೆ ತೊಂದರೆ ಇದೆ ಎಂದು ಅವರು ನಮಗೆ ಹೇಳಿದರು. ಹಾಗೆಯೇ ನೀರು ನಮಗೆ ಬಿಟ್ಟರೂ ಕೂಡ ಅಲ್ಲಲ್ಲಿ ನೀರಾವರಿಗಾಗಿ ಈ ನೀರನ್ನು ಹಿಡಿದುಕೊಳ್ಳುತ್ತಾರೆ. ಹಾಗಾಗಿ ನೀರು ತಲುಪುವುದಿಲ್ಲ ಎಂಬ ಶಂಕೆ ಅವರಿಗೂ ನಮಗೂ ಇದೆ. ಆದರೂ ಕೂಡ ಕಡಿಮೆ ಪಕ್ಷ ಮೂರು ಟಿಎಂಸಿ ನೀರನ್ನಾದರೂ ಬಿಡಿ ಎಂದು ಹೇಳಿದ್ದಕ್ಕೆ ನಾನು ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಇರಿಗೇಶನ್ ಸೆಕ್ರೆಟರಿ ಅಲ್ಲಿನ ಇರಿಗೇಶನ್ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದಾರೆ. ಇವೊತ್ತು ನಾಳೆ ಆ ಬಗ್ಗೆ ಮಾತುಕತೆ ಮಾಡಿ ನೀರು ಬಿಡುಗಡೆ ಮಾಡಲು ವಿನಂತಿಸಿಕೊಳ್ಳುತ್ತೇನೆ. ಆ ಪ್ರಯತ್ನವನ್ನು ಮುಂದುವರೆಸುತ್ತೇವೆ ಇನ್ನು ನವಿಲುತೀರ್ಥದಿಂದ ನೀರು ಸರಬರಾಜು ಮಾಡುವ ಬಗ್ಗೆ ನಾನು ವಿಚಾರ ಮಾಡುತ್ತೇನೆ. ನನಗೆ ಅದರ ಬಗ್ಗೆ ಸರಿಯಾದಂತಹ ಮಾಹಿತಿಗಳು ಇಲ್ಲ. ಕರ್ನಾಟಕ ರಾಜ್ಯದಾದ್ಯಂತ ಕುಡಿವ ನೀರಿನ ಸಮಸ್ಯೆ ಇದೆ, ಅದನ್ನು ನೋಡಿ ಹಣ ಬಿಡುಗಡೆ ಮಾಡುತ್ತೇವೆ. ಬಿಜಾಪುರಕ್ಕೆ ಹಣ ಬಿಡುಗಡೆ ಮಾಡಿದ್ದೇವೆ. ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಸಮಸ್ಯೆ ಇದೆ, ಅದನ್ನು ನೋಡಿ ಆದ್ಯತೆಯ ಮೇರೆಗೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಮಾನ್ಯ ಕಂದಾಯಸಚಿವರು ಈ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇದು ನಮ್ಮ ಗಮನದಲ್ಲಿದೆ ಎಂಬುದನ್ನು ತಿಳಿಸಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :-ಮಾನ್ಯ ಅಧ್ಯಕ್ಷರೇ, ಈಗಾಗಲೇ 6 ಗಂಟೆಯಾಗಿದೆ. ನಾನು ಮಹತ್ವದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ತಮ್ಮಲ್ಲಿ ಅನುಮತಿಯನ್ನು ಕೂಡ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು :- ಅನುಮತಿ ಇದೆಯೆಂದು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಾವು ಮಾಡಲು ಆಗುವುದಿಲ್ಲ. ತಮ್ಮ ಪ್ರಸ್ತಾಪವನ್ನು ನಾಳೆ ತೆಗೆದುಕೊಳ್ಳಿ. ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಒಂದು ಸಂದೇಶವು ಬಂದಿದೆ ಎಂದು ತಿಳಿಸುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 114 ರಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ 31-3-1993ರಂದು ಅನುಮೋದಿತವಾಗಿದೆ.

1) ಕರ್ನಾಟಕ ಮೋಟಾರು ವಾಹನಗಳ ತಿದ್ದುಪಡಿ ವಿಧೇಯಕ - 1993

2) ಕರ್ನಾಟಕ ತೆರಿಗೆ ಕಾನೂನುಗಳು ತಿದ್ದುಪಡಿ ವಿಧೇಯಕ - 1993

(2)

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿವೆ ಎಂದು ತಿಳಿಸುತ್ತೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 30-3-1993ರಂದು ಅನುಮೋದಿಸಲಾಗಿದೆ.

1) ಕರ್ನಾಟಕ ಧನ ವಿನಿಯೋಗ ಸಂಖ್ಯೆ-2, ವಿಧೇಯಕ, 1993

2) ಕರ್ನಾಟಕ ಧನ ವಿನಿಯೋಗ ಸಂಖ್ಯೆ-3, ವಿಧೇಯಕ, 1993

ಈಗ ಸಭೆಯ ಕಾರ್ಯಕಲಾಪಗಳು ಮುಕ್ತಾಯಗೊಳಿಸಿ ಮತ್ತೆ ನಾಳೆ ಬೆಳಿಗ್ಗೆ 9-30ಕ್ಕೆಸೇರುವುದು.

(ಸದನವು 6-17ಕ್ಕೆ ಮುಕ್ತಾಯಗೊಂಡು ಪುನಃ ಮರುದಿನ ಬೆಳಿಗ್ಗೆ 9-30ಕ್ಕೆ ಸೇರಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)